17

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಸಿಆಸುಇ:115: ಆರ್.ಟಿ.ಐ.:2015

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ: 13.08.2015.

# <u>ಸುತ್ತೋಲೆ</u>

ವಿಷಯ: ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 19(1)ರಡಿ ಸಲ್ಲಿಸಿದ ಮೊದಲ ಮೇಲ್ಮನವಿಗಳ ವಿಲೇ ಕುರಿತು

ಉಲ್ಲೇಖ: ಸುತ್ತೋಲೆ ಸಂ: ಸಿಆಸುಇ 116 ಆರ್‌ಟಿಐ 2009, ದಿ: 07.07.2010
ಸುತ್ತೋಲೆ ಸಂ: ಸಿಆಸುಇ 71 ಆರ್‌ಟಿಐ 2012, ದಿ: 29.06.2012
ಸುತ್ತೋಲೆ ಸಂ: ಸಿಆಸುಇ 92 ಆರ್‌ಟಿಐ 2012, ದಿ: 25.08.2012

---0---

ಮಾಹಿತಿ ಹಕ್ಕು ಅಧಿನಿಯಮ, 2005ರ ಸಂಪೂರ್ಣ ಅನುಷ್ಠಾನ ಮತ್ತು ಬಲವರ್ಧನೆಗಾಗಿ ಕರ್ನಾಟಕ ಮಾಹಿತಿ ಆಯೋಗವು 2013-14ನೇ ಸಾಲಿನಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ.(ಶಿಫಾರಸ್ಸು ಸಂಖ್ಯೆ: 7.8)

ನಿಯಮ 6(3)ರ ಉಪಬಂಧಗಳು ಮತ್ತು ಸಿಆಸುಇ ಸುತ್ತೋಲೆ ಸಂಖ್ಯೆ: ಡಿಪಿಎಆರ್ 92 ಆರ್‌ಟಿಐ 2012, ದಿನಾಂಕ: 25.08.2012ರಲ್ಲಿ ಹೊರಡಿಸಿದ ಸೂಚನೆಗಳನ್ನು ಮೊದಲನೆ ಮೇಲ್ಮನವಿ ಪ್ರಾಧಿಕಾರಿಗಳು ಅನುಸರಿಸದಿರುವುದು ಆಯೋಗದ ಗಮನಕ್ಕೆ ಬಂದಿದೆ.

(i) ಕೆಲವು ಮೊದಲನೆಯ ಮೇಲ್ಮನವಿ ಪ್ರಾಧಿಕಾರಿಗಳು ಕಲಂ 19(1)ರಡಿ ಸಲ್ಲಿಸಿದ ಮೇಲ್ಮನವಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ;

(ii) ಕೆಲವು ಮೊದಲನೆ ಮೇಲ್ಮನವಿ ಪ್ರಾಧಿಕಾರಿಗಳು ಕೇವಲ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಮಾಹಿತಿಯನ್ನು ಒದಗಿಸುವಂತೆ ನಿರ್ದೇಶನಗಳನ್ನು ನೀಡಿ ನಂತರ ಅವರಿಂದ ತಮ್ಮ ಆದೇಶದ ಅನುಪಾಲನಾ ವರದಿಯನ್ನು ಪಡೆದುಕೊಳ್ಳದೆ ಪ್ರಕರಣವನ್ನು ಮುಕ್ತಾಯ ಮಾಡುತ್ತಿರುತ್ತಾರೆ;

(iii) ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳೂ ಸೇರಿದಂತೆ, ಕೆಲವು ಮೊದಲನೆ ಮೇಲ್ಮನವಿ ಪ್ರಾಧಿಕಾರಿಗಳು ಮೇಲ್ಮನವಿ ವಿಲೇವಾರಿಗೆ ನಿರ್ದಿಷ್ಟಪಡಿಸಿರುವ ಅವಧಿಗಿಂತ ಸಾಕಷ್ಟು ದೀರ್ಘಾವಧಿಯವರೆಗೆ ವಿಚಾರಣೆಯನ್ನು ಮತ್ತೆ ಮತ್ತೆ ಮುಂದೂಡುತ್ತಿರುತ್ತಾರೆ.

ಇದರಿಂದ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿದಾರರು ಕಲಂ 19(3)ರ ಮೇರೆಗೆ ಆಯೋಗವನ್ನು ಸಂಪರ್ಕಿಸುವ ಒತ್ತಡಕ್ಕೆ ಸಿಲುಕುವಂತಾಗಿದೆ. ಇದು, ಆಯೋಗದ ಮೇಲೆ ಪ್ರಕರಣಗಳ ಭಾರಿ ಪ್ರಮಾಣದ ಹೊರೆ ಬೀಳುವುದಷ್ಟೇ ಅಲ್ಲ ಅರ್ಜಿದಾರರು ಬಹು ದೀರ್ಘಾವಧಿಯವರೆಗೆ ಕಾಯುವಂತೆ ಮಾಡುತ್ತಿದೆ.

2..

ಆದ್ದರಿಂದ ಎಲ್ಲ ಮೊದಲ ಮೇಲ್ಮನವಿ ಪ್ರಾಧಿಕಾರಗಳು ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸುವಂತೆ ಹಾಗೂ ಆಯೋಗವು ಗಮನಿಸಿರುವ ಅಂಶಗಳ ಮೇಲೆ ಕ್ರಮ ಕೈಗೊಂಡು, ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 19(1)ರಡಿ ಸಲ್ಲಿಸಲಾದ ಪ್ರಥಮ ಮೇಲ್ಮನವಿಗಳ ವಿಲೇವಾರಿಗೆ ಮುತುವರ್ಜಿಯಿಂದ ಮೇಲ್ವಿಚಾರಣೆ ಮಾಡುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ತಮ್ಮ ಆಡಳಿತದ ಅಧೀನದಲ್ಲಿ ಬರುವ ಎಲ್ಲ ಸಾರ್ವಜನಿಕ ಪ್ರಾಧಿಕಾರಗಳಿಗೆ ಸೂಚಿಸುವುದು.

(ಪರಮೇಶ್ ಪಾಂಡೆ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

**ಇವರಿಗೆ,**

ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು

**ಪ್ರತಿ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಎಲ್ಲ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮುಖ್ಯ ಮಾಹಿತಿ ಆಯುಕ್ತರ ಆಪ್ತ ಸಹಾಯಕರು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ(ಜನಸ್ಪಂದನ), ವಿ.ವಿ.ಗೋಪುರ. ಬೆಂಗಳೂರು.
5. ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

18/8/15

Office work\Right to information-2015\circulars